ಹಿಪ್ಪರಗಿ ಅಣೆಕಟ್ಟಿಗೆ ಸಂಬಂಧಿಸಿದಂತೆ ಪುನರ್ವಸತಿ ಕಾರ್ಯವು ಈವರೆಗೆ ಆರಂಭವಾಗಿಲ್ಲ. ಅದನ್ನು ಸಧ್ಯದಲ್ಲೆ ಪ್ರಾರಂಭಿಸಲಾಗುವುದು ಹಾಗೂ ಕುಟುಂಬಗಳಿಗೆ ಪರಿಹಾರ ನೀಡಲಾಗುವುದು.

1042 (1225) ಶ್ರೀ ಸಿದ್ದುಸಾವದಿ (ಜಮಖಂಡಿ): ಮಾನ್ಯ ಜಲಸಂಪನ್ಮೂಲ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ;

ಅ) ಜಮಖಂಡಿ ತಾಲ್ಲೂಕಿನಲ್ಲಿ ಸಾವಿರಾರು ಹೆಕ್ಟೇರು ಜಮೀನು ಸವಳು ಬಿದ್ದಿದ್ದು ಬಂಜರು ಭೂಮಿಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಅದನ್ನು ತಡೆಯಲು ಕೈಗೊಂಡ ಕ್ರಮಗಳೇನು;

ಆ) 01.04.2004 ರಿಂದ ಇಲ್ಲಿಯವರೆಗೆ ಕಾಡಾದಿಂದ ಜಮಖಂಡಿ ತಾಲ್ಲೂಕಿನಲ್ಲಿ ಕೈಗೊಂಡ ಕೆಲಸಗಳ ಸಂಖ್ಯೆ ಎಷ್ಟು; ಅವುಗಳಿಗೆ ಖರ್ಚಾದ ಹಣವೆಷ್ಟು; ಈ ಎಲ್ಲಾ ಕೆಲಸಗಳು ಯಾವ ಹಂತದಲ್ಲಿ ಇವೆ;

ಇ) 2006–07 ರಲ್ಲಿ ಮಂಜೂರಾದ ಆಲಬಾಳ–ಮುತ್ತೂರ ಮಧ್ಯದಲ್ಲಿರುವ ಕೆಲಸಗಳು ಯಾವ ಹಂತದಲ್ಲಿದೆ; ಈಗಾಗಲೇ ಎಷ್ಟು ಬಿಲ್ಲನ್ನು ಗುತ್ತಿಗೆದಾರನಿಗೆ ಪಾವತಿಸಲಾಗಿದೆ;

ಈ) ಕೆಲಸ ಮುಕ್ತಾಯವಾಗದೇ ಪೂರ್ತಿ ಬಿಲ್ ಕೊಡಲು ಕಾರಣವೇನು;

ಉ) ಪ್ರಸಕ್ತ ಸಾಲಿಗೆ ಜಮಖಂಡಿ ತಾಲ್ಲೂಕಿನ ಕಾಡಾದಲ್ಲಿ ಮಂಜೂರಾದ ಕೆಲಸಗಳಾವುವು; ಅವುಗಳನ್ನು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಕೆ.ಎಸ್. ಈಶ್ವರಪ್ಪ (ಜಲಸಂಪನ್ಮೂಲ ಸಚಿವರು)

ಅ) ಜಮಖಂಡಿ ತಾಲ್ಲೂಕಿನಲ್ಲಿ ಹಲವು ನೀರಾವರಿ ಪ್ರದೇಶವು ಸವಳು ಜವಳಾಗಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಅದನ್ನು ತಡೆಯಲು ಅಂತರ ಬಸಿಗಾಲುವೆ ಮತ್ತು ಹೊಲಬಸಿಗಾಲುವೆ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಕಾರ್ಯಗತಗೊಳಿಸಲಾಗುತ್ತಿದೆ.

ಆ) ಹೊಲ ಬಸಿಗಾಲುವೆಗೆ ಸಂಬಂಧಿಸಿದಂತೆ 2004–05 ರಿಂದ 2005–06ರ ವರೆಗೆ 9 ಕಾಮಗಾರಿಗಳನ್ನು (710.36 ಹೆ.) ತೆಗೆದುಕೊಂಡಿದ್ದು, ಎಲ್ಲಾ ಕಾಮಗಾರಿಗಳು ಪೂರ್ಣಗೊಂಡಿರುತ್ತವೆ ಹಾಗೂ ರೂ.7.83 ಲಕ್ಷಗಳು ಖರ್ಚಾಗಿರುತ್ತದೆ. 2006–07ನೇ ಸಾಲಿಗೆ 11 ಕಾಮಗಾರಿಗಳನ್ನು (777.48 ಹೆ.)

ರೂ.29.00 ಲಕ್ಷಗಳ ಅಂದಾಜಿನಲ್ಲಿ ತೆಗೆದುಕೊಂಡಿದ್ದು, ಈ ಎಲ್ಲಾ ಕಾಮಗಾರಿಗಳಿಗೂ ಟೆಂಡರ್ ಕರೆಯಲಾಗಿದೆ.

ಇ) 2006–07ನೇ ಸಾಲಿನ ಕಾರ್ಯಕ್ರಮದಲ್ಲಿ ಆಲಬಾಳ–ಮುತ್ತೂರ ಕಾಮಗಾರಿಗಳು ಸೇರಿದ್ದು, ಈಗ ಟೆಂಡರ್ ಕರೆಯಲಾಗಿದ್ದು, ಕೆಲಸ ಪ್ರಾರಂಭವಾಗಿರುವುದಿಲ್ಲ.

ಈ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಉ) ಜಮಖಂಡಿ ತಾಲ್ಲೂಕಿನಲ್ಲಿ ಭೂ ಸುಧಾರಣೆಯ ಹೊಲ ಬಸಿಗಾಲುವೆಗೆ ಸಂಬಂಧಿಸಿದಂತೆ ಈ ಕೆಳಕಂಡ ಕಾಮಗಾರಿಗಳು ಮಂಜೂರಾಗಿದ್ದು, ಈಗಾಗಲೇ ಟೆಂಡರ್ ಕರೆಯಲಾಗಿದ್ದು, ಈ ಮಾಹೆಯ ಅಂತ್ಯದೊಳಗೆ ಕಾಮಗಾರಿಗಳನ್ನು ಪ್ರಾರಂಭಿಸಲಾಗುವುದು.

ಕ್ರ. ಸಂ.	ಗ್ರಾಮ ಹಾಗೂ ಬ್ಲಾಕ್	ಕ್ಷೇತ್ರ (ಹೆಕ್ಟೇರ್)	ಟೆಂಡರಿಗಿಟ್ಟ ಮೊತ್ತ (ರೂ.)
1.	ಆಲಬಾಳ–I	69.22	254032
2.	ಆಲಬಾಳ– II	92.54	369819
3.	ಆಲಬಾಳ– III	93.74	358626
4.	ಮೈಗೂರ್– III	60.00	239927
5.	ಮೈಗೂರ್– IV	61.30	203974
6.	ಮುತ್ತೂರ– I	67.73	246865
7.	ಮುತ್ತೂರ– II	71.20	273645
8.	ಕುಲಹಳ್ಳಿ– I	63.87	238253
9.	ಕುಲಹಳ್ಳಿ– II	53.92	205908
10.	ಕುಲಹಳ್ಳಿ– III	83.35	300364
11.	ಕುಲಹಳ್ಳಿ– IV	60.61	215967
	ಒಟ್ಟು	**777.48**	**2907380**

1043 (1269) ಶ್ರೀ ಸಿಂಧೂರ ಜಿ. ರಾಜಶೇಖರ (ಶಿಗ್ಗಾಂವ್): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ;